**ಸಾಕ್ಷಿಯನ್ನು ದಿಃ 08.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 5 ರಿಂದ 7 ನೇ ಪ್ರತಿವಾದಿ ಪರ ಶ್ರೀ ಆರ್.ಕೆ. ವಕೀಲರ ಪರವಾಗಿ ಶ್ರೀ ಡಿ.ಜೆ ವಕೀಲರಿಂದಃ-**

ಸರ್ವೆ ನಂ. 140/2 ಐಟಂ ನಂ. 2 ಅನ್ನು ನಮ್ಮ ತಂದೆಗೆ ಸಣ್ಣೇಗೌಡರ ಮಗ ಮಾದೇಗೌಡ ಎಂಬುವವರು ಕ್ರಯ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಆಧಾರ ಮಾಡಿಕೊಟ್ಟಿದ್ದು ನಂತರ ವಾಪಸ್ಸು ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರದ ಡಿಜಿಟಲಿ ಸೈನ್ಡ್ ಪ್ರತಿಯನ್ನು **ನಿಡಿ. 3** ಎಂದು ಗುರುತಿಸಲಾಯಿತು. ಸರ್ವೆ ನಂ. 139/2 ರ ಐಟಂ ನಂ. 3 ರಲ್ಲಿ 1 ಎಕರೆ 8 ಗುಂಟೆ ಜಮೀನನ್ನು ಅಕ್ಕಯ್ಯಮ್ಮ ನವರಿಂದ ನಮ್ಮ ತಂದೆ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ನಾವೆಲ್ಲರೂ ಸೇರಿ ಪಡೆದುಕೊಂಡಿದ್ದೆವು ಎನ್ನುತ್ತಾರೆ. ಒಟ್ಟಾಗಿ ಖರೀದಿ ಮಾಡಿದ ಬಗ್ಗೆ ಸದರಿ ಕ್ರಯ ಪತ್ರದಲ್ಲಿ ಬರವಣಿಗೆ ಇರುವುದಿಲ್ಲ. ಒಂದು ವೇಳೆ ಜಂಟಿಯಾಗಿ ಖರೀದಿ ಮಾಡಿದ್ದರೆ ಕ್ರಯ ಪತ್ರದಲ್ಲಿ ಎಲ್ಲರ ಹೆಸರು ಇರುತ್ತಿತ್ತು ಎಂದರೆ ನಾವೆಲ್ಲರೂ ಒಟ್ಟಾಗಿ ಇದ್ದ ಕಾರಣ ತಂದೆ ಹೆಸರಿನಲ್ಲಿ ಖರೀದಿ ಮಾಡಿದ್ದೆವು ಎನ್ನುತ್ತಾರೆ. ಸದರಿ ಕ್ರಯ ಪತ್ರದ ಡಿಜಿಟಲಿ ಸೈನ್ಡ್ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಡಿ. 4** ಎಂದು ಗುರುತಿಸಲಾಯಿತು.

ಐಟಂ ನಂ. 2 ಸ್ವತ್ತಿಗೆ ಸಂಬಂಧಿಸಿದಂತೆ 5 ನೇ ಪ್ರತಿವಾದಿ ಗಂಡ ಚಂದ್ರಶೇಖರ ರವರಿಗೆ ನಾವೆಲ್ಲರೂ ಸೇರಿ ದಿಃ 29.04.2010 ರಂದು ನಾನು, ನನ್ನ ತಂದೆ ಉಳಿದವರೆಲ್ಲರೂ ಸೇರಿ ಕ್ರಯ ಪತ್ರ ಮಾಡಿ ಕೊಟ್ಟಿರುತ್ತೇವೆ ಎಂದರೆ ಸಾಕ್ಷಿ ಅಧಾರ ಮಾಡಿ ಕೊಟ್ಟಿರುತ್ತೇವೆ ಎನ್ನುತ್ತಾರೆ. ಸದರಿ ಕ್ರಯ ಪತ್ರದಲ್ಲಿ ಅವರು ಕೊಟ್ಟ ಹಣಕ್ಕೆ ಅಧಾರವಾಗಿ ಸದರಿ ದಾಖಲೆ ಬರೆಯಲಾಗಿದೆ ಎಂದು ನಮೂದಿಸಲಾಗಿದೆಯೆ ಎಂದರೆ ಸಾಕ್ಷಿ ನಂಬಿಕೆ ಮೇರೆಗೆ ಆ ರೀತಿ ನಮ್ಮ ತಂದೆ ಬರೆದುಕೊಟ್ಟಿದ್ದರೂ ಅಲ್ಲದೆ ಇನ್ಕಮ್ ಟ್ಯಾಕ್ಸ್ ಉದ್ದೇಶದಿಂದ ಹಾಗೆ ಕ್ರಯ ಪತ್ರ ಎಂದು ಬರೆಸಿಕೊಟ್ಟಿರುತ್ತಾರೆ ಎಂದು

ನುಡಿಯುತ್ತಾರೆ. ಸದರಿ ಕ್ರಯ ಪತ್ರದಲ್ಲಿ ನಾನು, ನನ್ನ ತಂದೆ, ಸಹೋದವರರು ಎಲ್ಲರೂ ಸಹಿ ಮಾಡಿರುತ್ತೇವೆ. ಅದರಲ್ಲಿ ಇರುವ ಪೋಟೋಗಳು ಸಹ ನಮ್ಮದೆ ಇರುತ್ತದೆ.

ಐಟಂ ನಂ. ಸರ್ವೆ ನಂ. 103/2 ರಲ್ಲಿ 2 ಎಕರೆ 18 ಗುಂಟೆ ಸಹ ದಿಃ 20.05.2011 ರಂದು 5 ನೇ ಪ್ರತಿವಾದಿ ಗಂಡ ಚಂದ್ರಶೇಖರ ರವರಿಗೆ ಕ್ರಯ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದಲ್ಲಿ ನಾನು, ನನ್ನ ತಂದೆ ಮತ್ತು ಸಹೋದರರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 5 ಮತ್ತು 7 ನೇ ಪ್ರತಿವಾದಿಗಳು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್ ನಂ. 126/2022 ರಂತೆ ನಮ್ಮ ವಿರುದ್ಧ ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಅದು ನಮ್ಮ ತಂದೆಗೆ ಗೊತ್ತಿರುತ್ತದೆ ಎನ್ನುತ್ತಾರೆ. ಸದರಿ ದಾವೆಯಲ್ಲಿ ನಾನು ವಕೀಲರನ್ನು ನೇಮಿಸಿಕೊಂಡು ಹಾಜರಾಗಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಪ್ರತಿವಾದ ಪತ್ರ ಸಹ ಸಲ್ಲಿಸಿದ್ದೇನೆ ಎಂದರೆ ಸರಿ.

ಐಟಂ ನಂ. ಸರ್ವೆ ನಂ. 103/2 ರಲ್ಲಿ 2 ಎಕರೆ 18 ಗುಂಟೆ ಜಮೀನನ್ನು ಮಾರಾಟ ಮಾಡುವ ಪೂರ್ವದಲ್ಲಿ 5 ನೇ ಪ್ರತಿವಾದಿ ಗಂಡನಿಗೆ ನಾವೆಲ್ಲರೂ ಸೇರಿ ಅಗ್ರಿಮೆಂಟ್ ಮಾಡಿ ಕೊಟ್ಟಿದ್ದೇವು ಎಂದರೆ ಸರಿಯಲ್ಲ. ಸದರಿ ಅಗ್ರಿಮೆಂಟ್ ನಲ್ಲಿ ಇರುವ ಸಹಿ ನಮ್ಮದಲ್ಲ, ಸದರಿ ಅಗ್ರಿಮೆಂಟ್ ನಲ್ಲಿ ಇರುವ ಪೋಟೊಗಳು ನನ್ನದು ಮತ್ತು ನನ್ನ ತಂದೆ ಮತ್ತು ಸಹೋದರರದ್ದು ಅಲ್ಲ ಎನ್ನುತ್ತಾರೆ. ನಾವು ಆ ರೀತಿ ಅಗ್ರಿಮೆಂಟ್ ಮಾಡಿಕೊಟ್ಟಿದ್ದರೂ ಸಹ 5 ನೇ ಪ್ರತಿವಾದಿ ಗಂಡನಿಗೆ ಕ್ರಯ ಮಾಡಿಕೊಡಬೇಕೆಂದು ಸುಳ್ಳು ಹೇಳಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಅಗ್ರಿಮೆಂಟ್ ಪ್ರಕಾರ 15 ಲಕ್ಷ ರೂ. ಮೊಬಲಗು ಮಾಡಿ 14 ಲಕ್ಷ ರೂ. ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಕ್ರಯ ಮಾಡಿಕೊಡುವುದಾಗಿ ಹೇಳಿಕೊಂಡು ಬಂದು 68,90,000/- ರೂ. ಗಳನ್ನು ಪಡೆದಿರುತ್ತೇವೆ

ಎಂದರೆ ಸರಿಯಲ್ಲ. 5 ರಿಂದ 7 ನೇ ಪ್ರತಿವಾದಿಗಳು ವಿದೇಶದಲ್ಲಿ ಇರುವುದರಿಂದ ನನ್ನ ತಂಗಿ ಮತ್ತು ಅಕ್ಕ ರವರಿಂದ ಸುಳ್ಳು ದಾವೆ ಹೂಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಅಲ್ಲದಿದ್ದರೂ ಸಹೋದರಿಯರನ್ನು ಎತ್ತಿ ಕಟ್ಟಿ ಸುಳ್ಳು ದಾವೆ ಹೂಡಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾವೆ ಆಸ್ತಿಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ವಾದಿಯವರು ಮತ್ತು ನಾವು ಶಾಮಿಲಾಗಿ 5 ರಿಂದ 7 ನೇ ಪ್ರತಿವಾದಿಗಳಿಗೆ ಮೋಸ ಮಾಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.